ಈ) 2003–04ನೇ ಸಾಲಿನಲ್ಲಿ ಬಂಗಾರಪೇಟೆ ತಾಲ್ಲೂಕಿಗೆ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚವಾಗಿರುವ ಮತ್ತು ಉಳಿಕೆ ಅನುದಾನದ ವಿವರ ಈ ಕೆಳಕಂಡಂತಿದೆ.

(ರು. ಲಕ್ಷಗಳಲ್ಲಿ)

ಕೋಲಾರ ಪ್ರಾದೇಶಿಕ ವಿಭಾಗ			ಕೋಲಾರ ಸಾಮಾಜಿಕ ಅರಣ್ಯ ವಿಭಾಗ		
ಅನುದಾನ	ವೆಚ್ಚ	ಉಳಿಕೆ	ಅನುದಾನ	ವೆಚ್ಚ	ಉಳಿಕೆ
32.001	32.001	Nil	22.563	21.807	0.756

2180 (3237) ಶ್ರೀ ರಾಜೇಂದ್ರನ್ .ಎಸ್. (ಕೆ.ಜಿ.ಎಫ್): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ.ಎಫ್. ನಗರ ಸಭೆಯ ವ್ಯಾಪ್ತಿಯಲ್ಲಿ ಬರುವ ಮೂರು ತಿಂಗಳಿಗೂ ಹೆಚ್ಚಿನ ಅವಧಿಯ ಬಾಕಿ ಹೊಂದಿರುವ ಕೈಗಾರಿಕೆ / ವ್ಯಾಪಾರಿ ಸಂಸ್ಥೆಗಳ ಸಂಖ್ಯೆ ಎಷ್ಟು;

ಆ) ಕೆ.ಜಿ.ಎಫ್. ನಗರ ಸಭೆಯ ವ್ಯಾಪ್ತಿಯಲ್ಲಿರುವ ವೈಯಕ್ತಿಕ ವಿದ್ಯುತ್ ಸಂಪರ್ಕ ಹೊಂದಿರುವವರ ಸಂಖ್ಯೆ ಎಷ್ಟು ಮತ್ತು ಅವರುಗಳಲ್ಲಿ ಮೂರು ತಿಂಗಳಿಗೂ ಹೆಚ್ಚಿನ ಅವಧಿಯ ಬಾಕಿ ಹೊಂದಿರುವವರ ಸಂಖ್ಯೆ ಎಷ್ಟು;

ಇ) ವಿದ್ಯುತ್ ಸಂಪರ್ಕವನ್ನು ತೆಗೆಯುವ ಕ್ರಮವನ್ನು ಕೈಗೊಳ್ಳುವ ಮುನ್ನ ಸ್ವಲ್ಪ ಕಾಲಾವಕಾಶವನ್ನು ನೀಡಲಾಗುವುದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕೆ.ಜಿ.ಎಫ್. ನಗರ ಸಭೆಯ ವ್ಯಾಪ್ತಿಯಲ್ಲಿ ಬರುವ ಮೂರು ತಿಂಗಳಿಗೂ ಹೆಚ್ಚಿನ ಅವಧಿಯ ಬಾಕಿ ಹೊಂದಿರುವ ಕೈಗಾರಿಕೆ / ವ್ಯಾಪಾರಿ ಸಂಸ್ಥೆಗಳ ಒಟ್ಟು ಸಂಖ್ಯೆ 983.

ಆ) ಕೆ.ಜಿ.ಎಫ್. ನಗರ ಸಭೆಯ ವ್ಯಾಪ್ತಿಯಲ್ಲಿ ಒಟ್ಟು 40.245 ವೈಯಕ್ತಿಕ ವಿದ್ಯುತ್ ಸಂಪರ್ಕಗಳಿದ್ದು (ಗೃಹ ವಿದ್ಯುತ್, ವಾಣಿಜ್ಯ ವಿದ್ಯುತ್ ಮತ್ತು ಕೈಗಾರಿಕಾ ವಿದ್ಯುತ್) ಇದರಲ್ಲಿ ಮೂರು ತಿಂಗಳಿಗೂ ಹೆಚ್ಚಿನ ಅವಧಿಯ ಬಾಕಿ ಹೊಂದಿರುವವರ ಸಂಖ್ಯೆ ಒಟ್ಟು 8238.

ಇ) ಯಾವಯಾವಾಗ ಬಾಕಿ ಬೀಳುವುದೊ ಆಗಿಂದಾಗೆ ಪಾವತಿಸಬೇಕಾಗುತ್ತದೆ.

2181 (3013) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು): ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪೆಪ್ಸಿಕೋಲಾ ಕಂಪನಿಯು ಸೇರಿದಂತೆ ವಿವಿಧ ಕಂಪನಿಗಳಿಗೆ ತೆರಿಗೆ ವಿನಾಯಿತಿಯನ್ನು ಸರ್ಕಾರ ಕಲ್ಪಿಸಿದೆಯೇ;

ಆ) ವಿನಾಯಿತಿ ನೀಡಲು ಕಾರಣಗಳೇನು ಹಾಗೂ ಇದರಿಂದ ರಾಜ್ಯದ ಬೊಕ್ಕಸಕ್ಕೆ ಆಗುತ್ತಿರುವ ನಷ್ಟ ಎಷ್ಟು;